**ಅ.ದಾ.ಸಂ. 163/2020 ಡಿ.ಡಬ್ಲೂ.1**

**<u>ದಿನಾಂಕಃ 17.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಬಿ.ಆರ್.ವಿ. ವಕೀಲರಿಂದಃ</u>**

1) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಅಂಶಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತು ತಮಗೆ ಸೇರಿದ್ದು ಎಂದು ಹೇಳಿ ವಾದಿಗಳು ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ. ನಮ್ಮ ತಂದೆ ತಾಯಿಗೆ ನಾವು ಒಟ್ಟು 4 ಜನ ಮಕ್ಕಳು. 1989 ರಿಂದ 2020 ರವರೆಗೆ ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ನಿಡಿ.6 ಮತ್ತು 7 ರಲ್ಲಿ ಸ್ವತ್ತಿನ ಖಾತಾ ನಂಬರ್ ಇರುವುದಿಲ್ಲ ಎಂದರೆ ಸರಿ. ನಿಡಿ.6 ಮತ್ತು 7 ರ ದಾಖಲೆಗಳು ಯಾವ ವರ್ಷದಿಂದ ಯಾವ ವರ್ಷಕ್ಕೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ.

2) ನನ್ನ ತಂದೆ ಪೊಲೀಸ್ ಅಧಿಕಾರಿಯಾಗಿ ಕರ್ತವ್ಯ ಮಾಡಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1989 ರಲ್ಲಿ ನನ್ನ ತಾಯಿಯ ಹೆಸರಿಗೆ ಕ್ರಯ ಪತ್ರ ಆಗಿತ್ತು. 1975 ರಲ್ಲಿ ದೊಡ್ಡಚನ್ನಯ್ಯನ ಮಗ ನಿಂಗಯ್ಯ ರವರು ದಾವಾ ಸ್ವತ್ತನ್ನು ವೆಂಕಟಮ್ಮ ರವರಿಗೆ ಮಾರಾಟ ಮಾಡಿದ್ದರು. ವಾದಿ ನಮ್ಮ ವಿರುದ್ಧ ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 1ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿರುವುದದಾಗಿ ನುಡಿಯುತ್ತಾರೆ. ನಿಡಿ.1 ಮತ್ತು 4 ರಲ್ಲಿನ ಕ್ರಯಪತ್ರಗಳಲ್ಲಿ ತಿಳಿಸಿರುವ ಸ್ವತ್ತುಗಳ ವಿವರಣೆಗಳು ಒಂದಕ್ಕೊಂದು ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ಪೂರಕ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3) ದಾವಾ ಸ್ವತ್ತು ಉತ್ತರ ದಕ್ಷಿಣವಾಗಿ 18 ಅಡಿಗಳು, ಪೂರ್ವ ಪಶ್ಚಿಮವಾಗಿ 64 ಅಡಿಗಳಿಂದ ಕೂಡಿರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಕಾಲು ದಾರಿ ಮತ್ತು ನಾಗಯ್ಯ ಮತ್ತು ವೆಂಕಟಯ್ಯ ರವರ ಮನೆಗಳು ಮತ್ತು ದಕ್ಷಿಣಕ್ಕೆ ಭಜನೆ ಮನೆ ಇರುತ್ತದೆ. ನನ್ನ ತಾಯಿ ದಾವಾ ಸ್ವತ್ತನ್ನು ವೆಂಕಟಮ್ಮ ರವರಿಂದ ಖರೀದಿ ಮಾಡಿದ್ದರು. ದಾವಾ ಸ್ವತ್ತಿನ ಖಾತೆಯು ಪ್ರಸ್ತುತ ನಿಂಗಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**